# ನನ್ನ ಆಸೆ

■ ಸೋಮಲಿಂಗ ಬೇಡರ ಆಳೂರ

ಸಣ್ಣದೊಂದು ಮನೆಯ ಮಾಡಿ
ಬಣ್ಣದಿಂದ ಚಂದಗೊಳಿಸಿ
ಕಣ್ಣ ತುಂಬ ನೋಡುವಾಸೆ

ತಂದೆ ತಾಯಿ ಅಣ್ಣ ತಂಗಿ
ನಂದಾದೀಪ ಹಚ್ಚಿ ಬೆಳಗಿ
ಒಂದುಗೂಡಿ ಬಾಳುವಾಸೆ

ಚಿಕ್ಕದಾದ ಮನೆಯ ಮುಂದೆ
ಚೊಕ್ಕದಾದ ತೋಟ ಮಾಡಿ
ಚಿಕ್ಕು ಸೇಬು ಬೆಳೆಯುವಾಸೆ

ಮನೆಯ ಮುಂದೆ ಬೆಳೆದ ಗಿಡಕೆ
ಅನ್ನ ನೀರು ತೂಗು ಹಾಕಿ
ಹಕ್ಕಿ ಬಳಗ ಕರೆಯುವಾಸೆ

ಪುಟ್ಟ ಪುಟ್ಟ ಗುಂಡಿ ತೋಡಿ
ನೆಟ್ಟು ಅಲ್ಲಿ ಹೂವು ಬಳ್ಳಿ
ಚಿಟ್ಟೆ ಮನಸು ಸೆಳೆಯುವಾಸೆ

ಎಳೆಯರೆಲ್ಲ ಕೂಡಿಕೊಂಡು
ಇಳೆಗೆ ಭಾರವಾಗದಂತೆ
ಬಾಳ್ವೆಯನ್ನು ಮಾಡುವಾಸೆ. ■



ಚಿತ್ರ: ವಿಜಯಕುಮಾರಿ

# ರಾಮಿ

■ ಡಾ.ಕೆ. ಬಿ. ರಂಗಸ್ವಾಮಿ



ಚಿತ್ರ: ವಿಜಯಕುಮಾರಿ

ಅಡುಗೆಮನೆಯ ಕಿಟಕಿಯಿಂದ
ಪುಟ್ಟ ಬೆಕ್ಕು ತೂರಿಬಂತು
ಅತ್ತ ಇತ್ತ ದೃಷ್ಟಿ ಹರಿಸಿ
ಪಾತ್ರೆಗಳ ಮೂಸಿತು

ಖಾಲಿ ಖಾಲಿ ಪಾತ್ರೆ ಕಂಡು
ಸಪ್ಪೆಮೋರೆ ಹಾಕಿತು
ಮೇಲೆ ಕೆಳಗೆ ಮೀಸೆ ಕುಣಿಸಿ
ಮಿಯಾಂವ್ ಮಿಯಾಂವ್ ಎಂದಿತು

ಮೆಲ್ಲ ಮೆಲ್ಲ ಹೆಜ್ಜೆಯಿಟ್ಟು
ನಾನು ಸನಿಹ ಹೋದೆನು
ಬಟ್ಟಲಲ್ಲಿ ಹಾಲು ಸುರಿದು
ಅದರ ಮುಂದೆ ಇಟ್ಟೆನು

ಮೂತಿ ತೂರಿ ಚಪಚಪನೆ
ಬೆಕ್ಕು ಹಾಲು ನೆಕ್ಕಿತು
ಬಟ್ಟಲನ್ನು ಬರಿದುಮಾಡಿ
ನನ್ನ ಬಳಿಗೆ ಬಂದಿತು

ಮೆಲ್ಲನೆತ್ತಿ ಅದನು ನಾನು
ಎದೆಗೆ ಅವುಚಿಕೊಡೆನು
ಬೆನ್ನು ಸವರಿ ಮುದ್ದು ಮಾಡಿ
ರಾಮಿ ಎಂದು ಕರೆದೆನು

ರಾಮಿ ಈಗ ನನ್ನ ಬಿಟ್ಟು
ಬೇರೆ ಎಲ್ಲೂ ಹೋಗದು
ಹಿಂದೆ ಮುಂದೆ ಸುತ್ತಿ ಸುಳಿದು
ಮಿಯಾಂವ್ ಮಿಯಾಂವ್ ಎನುವುದು. ■